**ಕ್ರಿ.ಮಿಸ್. ನಂ. 382 /2016**
**ಪಿ.ಡಬ್ಲೂ : 1**

<u>ದಿನಾಂಕ: **11-01-2024** ರಂದು ಸಾಕ್ಷಿದಾರನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆ ವಾದಿಯ ಪರವಾಗಿ ಶ್ರೀಮತಿ. ಬಿ.ಎಂ.ಆರ್. ವಕೀಲರಿಂದ :</u>

ಗುಲ್ಬರ್ಗಾದಲ್ಲಿ ನ್ಯಾಯ ಪಂಚಾಯಿತಿ ನಡೆದಿತ್ತು ಅಲ್ಲಿ ಎದುರುದಾರರು ಸರಿಯಾಗಿ ನೋಡಿಕೊಳ್ಳುತ್ತೇನೆ ಎಂದು ಹೇಳಿರುತ್ತಾರೆ, ಆದರೆ ಪುನಃ ಎದುರುದಾರರು ಪೊಲೀಸ್ ಕ್ವಾಟರ್ಸ್ ಕಲಬುರಗಿಯಲ್ಲಿ ನನಗೆ ಕಿರುಕುಳ ಕೊಡಲು ಪ್ರಾರಂಭಿಸಿದರು. ನಾನು ದೂರು ಕೊಡಲು ಠಾಣೆಗೆ ಹೋದಾಗ ನನ್ನ ಮಾವ ಪೊಲೀಸ್ ಇಲಾಖೆಯಲ್ಲಿ ಇದಿದ್ದರಿಂದ ಪ್ರಕರಣ ದಾಖಲು ಆಗಿರುವುದಿಲ್ಲ. ನಾನು ನನ್ನ ತವರು ಮನೆಗೆ ನನ್ನ ಮಗು ಜೊತೆ ಬಂದಿರುತೇನೆ. ನಾನು ಸಾಕಷ್ಟು ಸಲ ಗಂಡನ ಮನೆಗೆ ಹೋದರು ಸಹ ನನ್ನನ್ನು ಕರೆದುಕೊಂಡಿರುವುದಿಲ್ಲ. ಎದುರುದಾರರು ವಿಚ್ಚೇದನ ಅರ್ಜಿಯನ್ನು ಕಲಬುರಗಿಯಲ್ಲಿ ಹಾಕಿದ್ದರು, ಅದರಲ್ಲಿ ಯಾವುದೇ ಪರಿಹಾರ ನನಗೆ ಮತ್ತು ನನ್ನ ಮಗನಿಗೆ ಕೊಟ್ಟಿರುವುದಿಲ್ಲ. ನನ್ನ ಗಂಡ ಮೋಬೈಲ್ ಖಾಸಗಿ ಕಂಪನಿಯಲ್ಲ ಕೆಲಸ ಮಾಡುತ್ತಾನೆ, ಆತನಿಗೆ ತಿಂಗಳಿಗೆ **25** ಸಾವಿರ ವೇತನ ಇರುತ್ತದೆ. ನನ್ನ ಗಂಡನಿಗೆ ಹೊಲ ಇರುತ್ತದೆ ಅದರಿಂದ ವಾರ್ಷಿಕ ಆಧಾಯ ಎಲ್ಲಾ ಖರ್ಚು ತೆಗೆದು ಒಂದು ಲಕ್ಷ ಇರುತ್ತದೆ. ನನ್ನ ಮಾವ ಪೊಲೀಸ್ ಇಲಾಖೆಯಲ್ಲಿ ಡಿ ಆರ್ ಪಿ ಇದ್ದಾರೆ, ನನ್ನ ಅತ್ತೆ ಬಟ್ಟೆ ವ್ಯಾಪಾರ ಮಾಡುತ್ತಾಳೆ, ನನ್ನ ಮೈದುನಾ ಕಿರಾಣಿ ಅಂಗಡಿಯಲ್ಲ ಕೆಲಸ ಮಾಡುತ್ತಾನೆ. ನನ್ನ ಗಂಡನಿಗೆ ಜೀವನಾಂಶ ಕೊಡವ ಸಾಮರ್ಥ್ಯ ಇರುತ್ತದೆ. ನನ್ನ ಮಗನ ಓದುವ ಖರ್ಚನ್ನು ನಾನು ವಹಿಸಿಕೊಂಡಿರುತ್ತೇನೆ. ನನ್ನ ಗಂಡ ನನ್ನಗಾಲಿ ನನ್ನ ಮಗನಿಗಾಲಿ ಜೀವನಾಂಶ ಕೊಟ್ಟಿರುವುದಿಲ್ಲ. ನನಗೆ ಈಗ ದುಡಿಯಲು ಆಗುವುದಿಲ್ಲ. ನನ್ನ ತಾಯಿಗೆ ವಯಸ್ಸು ಆದ್ದರಿಂದ ನಮ್ಮನ್ನು ನೋಡಿಕೊಳ್ಳಲು ಆಗುವುದಿಲ್ಲ.

ನಾನು ನನ್ನ ಮಗನ ಸ್ಕೂಲ್ ಫೀ ಕಟ್ಟಿದ **29** ರಶೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-**1** ರಿಂದ **29** ಎಂದು ಗುರುತಿಸಲಾಯಿತು. ನಾನು ಅಗ್ರಿಗೋಲ್ಡ್ ಕಂಪನಿಯಲ್ಲಿನನ್ನ ಗಂಡನ ಹೆಸರಲ್ಲಿ ಜಮಾ ಮಾಡಿದ ಹಣದ ಬಗ್ಗೆ ರಶೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ-**30** ರಿಂದ **57** ಎಂದು ಗುರುತಿಸಲಾಯಿತು. ನಾನು ಹೊಲ ಸರ್ವೆ ನಂ.**83/4** ರ ಪಹಣಿ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-**58** ಎಂದು ಗುರುತಿಸಲಾಯಿತು. ನಾನು ಮದುವೆಯ ಆಮಂತ್ರಣ ಪತ್ರಿಕೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-**59** ಎಂದು ಗುರುತಿಸಲಾಯಿತು. ನಾನು ಬಂಗಾರ ಖರೀದಿಯ ರಶೀದಿಯನ್ನು

**ಕ್ರಿ.ಮಿಸ್. ನಂ. 382 /2016**
**ಪಿ.ಡಬ್ಲ್ಯೂ : 1**

**ಹಾಜರು ಪಡಿಸಿದ್ದು ಅದನ್ನು ನಿಪಿ-60 ಎಂದು ಗುರುತಿಸಲಾಯಿತು. ನಾನು ಸ್ಟೀಲ್ ಪಾತ್ರೆ ಖರೀದಿ ಮಾಡಿದ ರಶೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-61 ಎಂದು ಗುರುತಿಸಲಾಯಿತು. ನಾನು ಪರ್ನಿಚರ್ ಐಟಂ ಖರೀದಿ ಮಾಡಿದ ರಶೀದಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-62 ಎಂದು ಗುರುತಿಸಲಾಯಿತು.**

**ವಕೀಲರ ಕೋರಿಕೆ ಮೇರೆಗೆ ಮುಂದುಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ ಇದೆ.**

**ಪ್ರಧಾನ ಜೆ.ಎಂ.ಎಫ್.ಸಿ.**
**ಶಹಾಪೂರ**